28/1

# 2008

# ಕನ್ನಡ ಸಾಹಿತ್ಯ

## ಪತ್ರಿಕೆ 1

*ಸಮಯ : 3 ಗಂಟೆ ]* *[ ಗರಿಷ್ಠಾಂಕಗಳು : 300*

**ಸೂಚನೆಗಳು**

*ವಿಭಾಗ **A, B** ಮತ್ತು **C** ಗಳಲ್ಲಿನ ಎಲ್ಲ ಪ್ರಶ್ನೆಗಳಿಗೂ ಉತ್ತರಿಸಬೇಕು. ಆದರೆ ವಿಭಾಗ **D** ಯಲ್ಲಿ ಮೂರು ಪ್ರಶ್ನೆಗಳನ್ನಷ್ಟೇ ಆರಿಸಿ ಉತ್ತರಿಸಬೇಕು. ಪ್ರಶ್ನೆಗಳ ಅಂಕಗಳನ್ನು ಆಯಾ ವಿಭಾಗದ ಮುಂದೆಯೇ ನೀಡಲಾಗಿದೆ.*

*ಉತ್ತರಗಳು ಕನ್ನಡದಲ್ಲಿಯೇ ಇರತಕ್ಕದ್ದು.*

SEAL

[Turn over

## ಭಾಗ A

4×5=20

*ಒಂದೊಂದು ಪ್ರಶ್ನೆಗೂ 50 ಶಬ್ದಗಳ ಮಿತಿಯಲ್ಲಿ ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.*

1. (ಎ) ಕನ್ನಡದ ಸರ್ವನಾಮಗಳ ಒಳಭೇದಗಳನ್ನು ತಿಳಿಸಿ ಉದಾಹರಣೆಗಳೊಂದಿಗೆ ವಿವರಿಸಿರಿ.

   (ಬಿ) ದೇವರದಾಸಿಮಯ್ಯನ ವಚನಗಳಲ್ಲಿ ವ್ಯಕ್ತವಾಗಿರುವ ಭಕ್ತಿಯ ಸ್ವರೂಪವನ್ನು ವಿವರಿಸಿರಿ.

   (ಸಿ) ಸಹೃದಯನ ಲಕ್ಷಣಗಳನ್ನು ತಿಳಿಸಿರಿ.

   (ಡಿ) ಚಾಲುಕ್ಯ ಅಥವಾ ವಿಜಯನಗರ ವಾಸ್ತುಶಿಲ್ಪ ಶೈಲಿಯನ್ನು ಕುರಿತು ಟಿಪ್ಪಣಿ ಬರೆಯಿರಿ.

10×10=100

## ಭಾಗ B

*ಪ್ರತಿಯೊಂದು ಪ್ರಶ್ನೆಗೂ 100 ಶಬ್ದಗಳ ಮಿತಿಯಲ್ಲಿ ಈ ಕೆಳಗಿನ ಪ್ರಶ್ನೆಗಳಿಗೆ ಟಿಪ್ಪಣಿ ಬರೆಯಿರಿ.*

2. ದ್ರಾವಿಡ ಭಾಷೆಗಳ ಸಾಮಾನ್ಯ ಗುಣಲಕ್ಷಣಗಳನ್ನು ಉದಾಹರಣೆಗಳೊಂದಿಗೆ ವಿವರಿಸಿರಿ.

3. ಕನ್ನಡ ವರ್ಣಮಾಲೆಯ ಸ್ವರೂಪವನ್ನು ಕುರಿತು ಬಂದಿರುವ ವಿವಿಧ ಅಭಿಪ್ರಾಯಗಳನ್ನು ಸಂಗ್ರಹಿಸಿರಿ.

4. ಕನ್ನಡದ ವಿಭಕ್ತಿ ವ್ಯವಸ್ಥೆಯನ್ನು ಕುರಿತು ಬರೆಯಿರಿ.

5. ಹರಿಹರನ ರಗಳೆ ಕಾವ್ಯಗಳ ಸ್ವರೂಪ ಹಾಗೂ ಉದ್ದೇಶಗಳನ್ನು ವಿವರಿಸಿರಿ.

6. ಕುಮಾರವ್ಯಾಸ ಭಾರತದಲ್ಲಿ ವ್ಯಕ್ತಗೊಂಡ ಕೃಷ್ಣ ಭಕ್ತಿಯ ಸ್ವರೂಪವನ್ನು ವಿವರಿಸಿರಿ.

7. ಅಕ್ಕಮಹಾದೇವಿಯ ವಚನಗಳ ಕಾವ್ಯಾತ್ಮಕತೆಯನ್ನು ನಿರೂಪಿಸಿರಿ.

8. ಕರ್ನಾಟಕದಲ್ಲಿ ನಡೆದ ಸ್ವಾತಂತ್ರ್ಯಚಳುವಳಿಯ ವಿವಿಧ ಸ್ವರೂಪ ಹಾಗೂ ನಿರ್ವಹಣ ತಂತ್ರಗಳನ್ನು ವಿವರಿಸಿರಿ.

9. ಪ್ರತಿಭೆಯನ್ನು ಕುರಿತು ಮೀಮಾಂಸಕಾರರ ಅಭಿಪ್ರಾಯಗಳನ್ನು ಸಂಗ್ರಹಿಸಿರಿ.

10. ಸರಳ ರಗಳೆಯನ್ನು ಕುರಿತು ಟಿಪ್ಪಣಿ ಬರೆಯಿರಿ.

11. ರನ್ನನ ಗದಾಯುದ್ಧ (ಸಾಹಸಭೀಮವಿಜಯಂ) ದಲ್ಲಿ ಕವಿ ಬಳಸಿರುವ ಕಾವ್ಯನಿರೂಪಣ ತಂತ್ರದ ಸೊಗಸನ್ನು ವಿವರಿಸಿರಿ.

[Turn over

## ಭಾಗ C

*ಒಂದೊಂದು ಪ್ರಶ್ನೆಗೂ 150 ಶಬ್ದಗಳ ಮಿತಿಯಲ್ಲಿ ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.* *6×15=90*

**12.** ಕನ್ನಡ ಭಾಷೆಯ ವಿವಿಧ ಕಾಲಘಟ್ಟಗಳು.

**13.** ಬಸವಣ್ಣನ ಸಾಮಾಜಿಕ ಚಿಂತನೆಯ ಸ್ವರೂಪವನ್ನು ವಿವರಿಸಿರಿ.

**14.** ಕನ್ನಡ ಭಾಷೆಯ ವಿವಿಧ ಪ್ರಾದೇಶಿಕ ಸ್ವರೂಪವನ್ನು ಉದಾಹರಣೆಗಳೊಂದಿಗೆ ವಿವರಿಸಿರಿ.

**15.** ಕರ್ನಾಟಕದಲ್ಲಿ ಏಕೀಕರಣ ಚಳುವಳಿ ನಡೆದುಬಂದ ಬಗೆಯನ್ನು ವಿವರಿಸಿರಿ.

**16.** ಧ್ವನಿ ಎಂದರೇನು ? ಕಾವ್ಯಮೀಮಾಂಸೆಯ ಹಿನ್ನೆಲೆಯಲ್ಲಿ ಉದಾಹರಣೆಗಳೊಂದಿಗೆ ವಿವರಿಸಿರಿ.

**17.** ಕರ್ನಾಟಕದಲ್ಲಿ ಜರುಗಿದ ಪ್ರಮುಖ ಧಾರ್ಮಿಕ ಚಳುವಳಿಗಳನ್ನು ಕುರಿತು ಬರೆಯಿರಿ.

## ಭಾಗ D

*3×30=90*

*ಒಂದೊಂದು ಪ್ರಶ್ನೆಗೂ 300 ಶಬ್ದಗಳ ಮಿತಿಯಲ್ಲಿ ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರ ಬರೆಯಿರಿ.*

**18.** ಕನ್ನಡ ಭಾಷೆಯ ಪ್ರಾಚೀನತೆಯನ್ನು ಕುರಿತು ವಿದ್ವಾಂಸರ ಅಭಿಪ್ರಾಯಗಳನ್ನು ಸಂಗ್ರಹಿಸಿರಿ.

**19.** ಇವುಗಳಲ್ಲಿ ಯಾವುದಾದರೂ ಎರಡನ್ನು ಕುರಿತು ಬರೆಯಿರಿ :

(ಎ) ಅಲ್ಲಮನ ಬೆಡಗಿನ ವಚನಗಳು

(ಬಿ) ರತ್ನಾಕರವರ್ಣಿಯ ಭರತ

(ಸಿ) ಮುದ್ದಣ - ಮನೋರಮೆಯರ ಸಂಭಾಷಣೆಯ ಸೊಗಸು

(ಡಿ) ಕನ್ನಡ ಭಾವಗೀತೆಯ ಸ್ವರೂಪ

**20.** ಕನ್ನಡ ಶಾಸನಗಳು ನಿರೂಪಿಸುವ ಕರ್ನಾಟಕ ಸಂಸ್ಕೃತಿಯ ಸ್ವರೂಪವನ್ನು ವಿಶದೀಕರಿಸಿರಿ.

**21.** ಕನ್ನಡದಲ್ಲಿ ಲಿಂಗವ್ಯವಸ್ಥೆಯ ಪರಿಕಲ್ಪನೆ.

**22.** "ವಸ್ತು ನಿರ್ವಹಣೆ, ಪಾತ್ರಚಿತ್ರಣ, ಹಾಗೂ ದರ್ಶನ - ಎಲ್ಲದರಲ್ಲೂ ಕುವೆಂಪು ಅವರ ರಾಮಾಯಣದರ್ಶನಂ ಕನ್ನಡದ ಮಹೋನ್ನತ ಕಾವ್ಯ" — ವಿವೇಚಿಸಿರಿ.

SEAL

## ಭಾಗ D

*3×30=90*

*ಒಂದೊಂದು ಪ್ರಶ್ನೆಗೂ 300 ಶಬ್ದಗಳ ಮಿತಿಯಲ್ಲಿ ಯಾವುದಾದರೂ **ಮೂರು** ಪ್ರಶ್ನೆಗಳಿಗೆ ಉತ್ತರ ಬರೆಯಿರಿ.*

**18.** ಕನ್ನಡ ಭಾಷೆಯ ಪ್ರಾಚೀನತೆಯನ್ನು ಕುರಿತು ವಿದ್ವಾಂಸರ ಅಭಿಪ್ರಾಯಗಳನ್ನು ಸಂಗ್ರಹಿಸಿರಿ.

**19.** ಇವುಗಳಲ್ಲಿ ಯಾವುದಾದರೂ **ಎರಡನ್ನು** ಕುರಿತು ಬರೆಯಿರಿ :

(ಎ) ಅಲ್ಲಮನ ಬೆಡಗಿನ ವಚನಗಳು

(ಬಿ) ರತ್ನಾಕರವರ್ಣಿಯ ಭರತ

(ಸಿ) ಮುದ್ದಣ - ಮನೋರಮೆಯರ ಸಂಭಾಷಣೆಯ ಸೊಗಸು

(ಡಿ) ಕನ್ನಡ ಭಾವಗೀತೆಯ ಸ್ವರೂಪ

**20.** ಕನ್ನಡ ಶಾಸನಗಳು ನಿರೂಪಿಸುವ ಕರ್ನಾಟಕ ಸಂಸ್ಕೃತಿಯ ಸ್ವರೂಪವನ್ನು ವಿಶದೀಕರಿಸಿರಿ.

**21.** ಕನ್ನಡದಲ್ಲಿ ಲಿಂಗವ್ಯವಸ್ಥೆಯ ಪರಿಕಲ್ಪನೆ.

**22.** "ವಸ್ತು ನಿರ್ವಹಣೆ, ಪಾತ್ರಚಿತ್ರಣ, ಹಾಗೂ ದರ್ಶನ - ಎಲ್ಲದರಲ್ಲೂ ಕುವೆಂಪು ಅವರ ರಾಮಾಯಣದರ್ಶನಂ ಕನ್ನಡದ ಮಹೋನ್ನತ ಕಾವ್ಯ" — ವಿವೇಚಿಸಿರಿ.

## ಭಾಗ A

4×5=20

*ಈ ಕೆಳಗಿನ ಪದ್ಯಗಳ ಭಾವ ಮತ್ತು ಸ್ವಾರಸ್ಯವನ್ನು ವಿವರಿಸಿ.*

1. (ಎ) ಕಲಿತನದುರ್ಕು ಜವ್ವನದ ಸೊರ್ಕು ನಿಜೇಶನ ನಚ್ಚುಮಿಕ್ಕ
ತೋಳ್ವಲದ ಪೊಡರ್ಪು ಕರ್ಣ ನಿನಗುಳ್ಳ ನಿತೇನೆನಗುಂಟೆ ಭಾರತಂ
ಕಲಹಮಿದಿರ್ಚುವಂ ಹರಿಗನಪ್ಪೊಡೆ ಮೊಕ್ಕಳಮೇಕೆ ನೀಂ ಪಳಂ
ಚಲಿದಪೆಯಣ್ಣ ಸೂಳ್ಪುಡೆಯಲಪ್ಪುದು ಕಾಣ ಮಹಾಜರಂಗದೊಳ ||

(ಬಿ) ಜಡೆಗಳಿದು ಮಕುಟಮಂ ನಾರಸೀರೆಯನು ತೊಱೆ
ದುಡಿಗೆಯಂ ರುದ್ರಾಕ್ಷಿಮಾಲೆಯಂ ಕಳೆದು ಮಣಿ
ದೊಡಿಗೆಯಂ ಕಂದಮೂಲವನೊಲ್ಲ ದೂಟಮಂ ದರ್ಭೆಯಂ ಬಿಟ್ಟಸಿಯನು |
ಅಡವಿಯಂ ಬಿಟ್ಟು ನಗರಿಯ ಭಸಿತಮಂ ಬಿಟ್ಟು
ಕಡುಸುಗಂಧಂಗಳ ಜಿತೇಂದ್ರಿಯತ್ವವ ಬಿಟ್ಟು
ಮಡದಿಯರ ಜಗವಱಿಯೆ ಕೂಡಲು ವ್ರತಕ್ಕೆ ಮುಪ್ಪಾಯ್ತೆ ಮುಪ್ಪಿನೊಳೆಂದರು |

(ಸಿ) ಕಾದಿ ಕೊಲುವಡೆ ಪಾಂಡುಸುತರು ಸ
ಹೋದರರು ಕೊಲಲಿಲ್ಲ ಕೊಲ್ಲದೆ
ಕಾದೆನಾದಡೆ ಕೌರವಂಗವನಿಯಲಿ ಹೊಗಲಿಲ್ಲ
ಭೇದದಲಿ ಹೊಕ್ಕಿಱಿದನೋ ಮಧು
ಸೂದನನು ತಾನಕಟನುತ ಚಂ
ತೋದಧಿಯಲದ್ದಂತೆ ಮೌನದೊಳಿದ್ದನಾ ಕರ್ಣ

(ಡಿ) ಕೇಳಣ್ಣ, ನಾನೊಬ್ಬ ಹಳೆಯ ಮುತ್ತೈದೆ-ಹಿರಿದಾಗಿ ಬಾಳಿದವಳೊಮ್ಮೆ
ಈಗ ಬಡತನ, ಬಡವೆ, ಬಡವಾದೆ : ಬಡವಾದ ಮಕ್ಕಳನು ನೋಡಿ,
ಬತ್ತಿ, ಮತ್ತಿಮ್ಮಡಿಯ ಸೊರಗಿನಲಿ ಬಡವಾದೆ-ಸಾವಿಲ್ಲ ನನಗೆ !
ಸಾವಿಲ್ಲ - ಸಾಯುತಿಹೆ : ಹೊಸಮಳೆಗಳಾಗಿ, ನೆಲಹೊಸ ಹೊನಲು ಹರಿದು,
ಹೊಸ ಹಮ್ಮು ಹಮ್ಮುತ್ತ ಎಲ್ಲರೂ ನನ್ನಕ್ಕ ತಂಗಿಯರು - ಚಿಗುರಿ
ಎಲ್ಲರೂ ಚೆಲುವಾದರೆಲ್ಲರೂ ಚೆನ್ನವಾದರು - ನೋಡು, ನೋಡು -
ಆ ಕಡೆಗೆ, ಈ ಕಡೆಗೆ ತೂಗುವರು ತೊನೆಯುವರು, ಆ ಪೂಂಕ, ಬಿಂಕ !
ಪೇರೊಕ್ಕಲಾಗಿ ಪಾಡುವರು;
ಅವರ ಮಕಳು ಬೆಳೆದು ಕಳೆಗೂಡಿ ಮನೆ ಬೆಳಗಿ ಹಬ್ಬ ಮಾಡುವರು
ತಾವ್ ಮೊದಲು ಬದುಕಿ
ತಾಮ್ ಮೊದಲು ಬದುಕಿ
ಹೆರರ ಹೊರೆಗಳನಿಳಿಸೆ ಹೆರರ ಸೆರೆಗಳ ಬಿಡಿಸೆ, ಕಟ್ಟು ನೀಡುವರು

10×10=100

## ಭಾಗ B

*ಒಂದೊಂದು ಪ್ರಶ್ನೆಗೂ 100 ಶಬ್ದಗಳ ಮಿತಿಯಲ್ಲಿ ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.*

**2.** 'ಕನ್ನಡದ ಬಾವುಟ' ಸಂಕಲನದಲ್ಲಿ ಕನ್ನಡ ನಾಡು - ನುಡಿಯ ಹಿರಿಮೆ ವ್ಯಕ್ತಗೊಂಡ ಬಗೆಯನ್ನು ನಿರೂಪಿಸಿರಿ.

**3.** ಪಂಪಭಾರತದಲ್ಲಿ ನಿರೂಪಿತವಾದ ಕರ್ಣ ಕುಂತಿಯರ ನಡುವಣ ಸಂಭಾಷಣೆಯ ಸ್ವಾರಸ್ಯವನ್ನು ಸಂಗ್ರಹಿಸಿರಿ.

**4.** ಬಸವಣ್ಣನವರ ವಚನಗಳಲ್ಲಿ ತೋರುವ ಸಾಮಾಜಿಕ ಕಳಕಳಿಯನ್ನು ನಿರೂಪಿಸಿರಿ.

**5.** ಸರ್ವಜ್ಞನ ವಚನಗಳಲ್ಲಿ ಕಾಣಿಸುವ ಸಾಮಾಜಿಕ ವಿಡಂಬನೆಯ ಸ್ವರೂಪವನ್ನು ವಿವರಿಸಿರಿ.

**6.** ರೋಹಿತಾಶ್ವನ ಹೆಣವನ್ನು ಕಂಡ ಚಂದ್ರಮತಿ ದುಃಖಿಸಿದ ಬಗೆಯನ್ನು ನಿರೂಪಿಸಿರಿ.

**7.** 'ನವ್ಯ' ಸಂಪ್ರದಾಯದ ಕಥೆಗಳ ಸ್ವರೂಪ - ಆಶಯಗಳನ್ನು ನಿಮಗಿರಿಸಿದ ಪಠ್ಯದ ಹಿನ್ನೆಲೆಯಲ್ಲಿ ಚರ್ಚಿಸಿರಿ.

**8.** ಒಗಟುಗಳ ಕಾರ್ಯ ಮತ್ತು ಸ್ವರೂಪವನ್ನು ವಿವರಿಸಿರಿ.

**9.** ನವೋದಯ ಕಾವ್ಯದ ಗುಣ ಲಕ್ಷಣಗಳನ್ನು ವಿವರಿಸಿರಿ.

**10.** 'ಗರತಿಯ ಹಾಡು' ವ್ಯಕ್ತಗೊಂಡಿರುವ ಮಹಿಳಾಸಂವೇದನೆಯನ್ನು ವಿವರಿಸಿರಿ.

**11.** 'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ವಿವಿಧ ಪಾತ್ರಗಳ ಅನನ್ಯತೆಯನ್ನು ಪರಿಶೀಲಿಸಿ.

[Turn over

## ಭಾಗ C

*ಒಂದೊಂದು ಪ್ರಶ್ನೆಗೂ 100 ಶಬ್ದಗಳ ಮಿತಿಯಲ್ಲಿ ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರ*

**12.** 'ಆದಿ ಪುರಾಣ'ದ ಭರತ ಬಾಹುಬಲಿಯರ ಯುದ್ಧ ಪ್ರಸಂಗವನ್ನು ವಿವರಿಸಿ

**13.** 'ಲಲಿತಪ್ರಬಂಧಗಳು ಗದ್ಯ ಸ್ವರೂಪದ ಭಾವಗೀತಗಳು' - ಒಪ್ಪಬಹು

**14.** ಬೆರಳ್ಗೆ ಕೊರಳ್ ನಾಟಕದಲ್ಲಿ ವ್ಯಕ್ತಗೊಂಡ ಕವಿಯ ದರ್ಶನದ -

**15.** ಪ್ರಗತಿಶೀಲ ಸಾಹಿತ್ಯದ ದೃಷ್ಟಿ ಧೋರಣೆಗಳೇನು ? ವಿವರಿ

**16.** 'ಭಾರತೀಪುರ' ಕಾದಂಬರಿಯ ಜಗನ್ನಾಥನ ವೈಚಾ

**17.** 'ಚೋಮನ ದುಡಿ' ದಲಿತರ ಬದುಕಿನ ದಾರು